ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 22.01.2026

ಪಾಟೀ ಸವಾಲು ಃ ಪ್ರತಿವಾದಿಯ ಪರ ಶ್ರೀ. ಡಿ.ಆರ್.ಎಂ ವಕೀಲರಿಂದ

1. ನನ್ನ ತಂದೆಯಾದ ವಾದಿಯು ಆರೋಗ್ಯದಿಂದ ಚೆನ್ನಾಗಿಯೆ ಇದ್ದಾರೆ ಎಂದರೆ ಸರಿಯಲ್ಲ. ನಾನು ಎಸ್.ಎಸ್ ಎಲ್ ಸಿ ಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ತಂದೆಯು ದಾಖಲಿಸಿರುವ ಪ್ರಸ್ತುತ ದಾವೆಯ ಸಂಗತಿಗಳು ಗೊತ್ತು. ನನ್ನ ದೊಡ್ಡಪ್ಪನಾದ ಪ್ರತಿವಾದಿಗೆ ಸುಮಾರು 70 ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆ ಮತ್ತು ದೊಡ್ಡಪ್ಪನ ನಡುವೆ ಏನು ವ್ಯವಹಾರ ನಡೆದಿದೆ ಎಂದು ನನಗೆ ಗೊತ್ತಿಲ್ಲ.

2. ನನ್ನ ಅಜ್ಜನ ಹೆಸರು ತಿಮ್ಮೇಗೌಡ ಆಗಿರುತ್ತದೆ. ನನ್ನ ಅಜ್ಜಿಯ ಹೆಸರು ಕೆಂಪಮ್ಮ ಹೆಸರು ಆಗಿರುತ್ತದೆ. ನನ್ನ ತಾತನಾದ ತಿಮ್ಮೇಗೌಡರು ಎಷ್ಟು ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿಯು ಕಳೆದ ಏಳು ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನನ್ನ ಅಜ್ಜಿ ನನ್ನ ದೊಡ್ಡಪ್ಪನಾದ ಪ್ರತಿವಾದಿಗಳ ಜೊತೆಗೆ ವಾಸ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವೆಲ್ಲಾ ಒಟ್ಟಿಗೆ ವಾಸ ಇದ್ದೆವು ಎಂದು ನುಡಿಯುತ್ತಾರೆ. ಈಗಲೂ ಸಹ ನಾವು ಜಂಟಿ ಕುಟುಂಬದಲ್ಲಿ ವಾಸ ಇದ್ದೇವೆ. ಪ್ರತಿವಾದಿಗಳು ನಮ್ಮ ಜೊತೆ ಜಗಳ ಮಾಡಿದ ನಂತರ ಸದರಿ ಮನೆಯಲ್ಲಿ ಇದ್ದ ಕುರಿ ಶೆಡ್‌ನಲ್ಲಿ ನಾವು ವಾಸ ಆಗಿರುತ್ತೇವೆ. ಕಳೆದ ಒಂದು ವರ್ಷದ ಹಿಂದೆ ನಾವು ಕುರಿ ಶೆಡ್‌ನಲ್ಲಿ ವಾಸ ಇದ್ದೇವೆ. ಕುರಿ ಶೆಡ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರ ಎಂದರೆ ಸಾಕ್ಷಿಯು ಅದು ನಾವು

ವಾಸವಾಗಿದ್ದ ಜಂಟಿ ಮನೆಯಲ್ಲಿಯೆ ಇದೆ ಎಂದು ನುಡಿಯುತ್ತಾರೆ. ಜಂಟಿ ಮನೆಯಲ್ಲಿ ವಾಸವಾಗಿರುವುದಕ್ಕೆ ಸಂಬಂಧಪಟ್ಟಂತೆ ನಾವು ಕಂದಾಯವನ್ನು ಶೀಳನೆರೆ ಗ್ರಾಮ ಪಂಚಾಯ್ತಿಯಲ್ಲಿ ಪ್ರತಿವಾದಿಯ ಹೆಸರಿನಲ್ಲಿ ಪಾವತಿ ಮಾಡುತ್ತಿರುತ್ತೇವೆ. ನಾನು ದಾಖಲಾತಿಯನ್ನು ಈ ಬಗ್ಗೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ನಾನು ಪಂಚಾಯ್ತಿಯಲ್ಲಿ ದಾಖಲಾತಿಯ ಬಗ್ಗೆ ವಿಚಾರಿಸಿರುವುದಿಲ್ಲ. ಪ್ರತಿವಾದಿಯು ಎಷ್ಟು ರೂಪಾಯಿ ಕಂದಾಯ ಪಾವತಿ ಮಾಡುತ್ತಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಅಸೆಸ್‌ಮೆಂಟ್ ನಂಬರ್ ನನಗೆ ಗೊತ್ತಿಲ್ಲ.

3. ನಮ್ಮ ತಂದೆಗೆ ಮತ್ತು ಪ್ರತಿವಾದಿಗೆ ಸಂಬಂಧಪಟ್ಟಂತೆ ಎರಡು ಮನೆಗಳು ಇದ್ದು ಒಂದು ಹಳೆಯ ಮನೆ ಆಗಿದ್ದು ಇನ್ನೊಂದು ಮನೆಯನ್ನು ನಾವು ಮತ್ತು ಪ್ರತಿವಾದಿಗಳು ಒಟ್ಟಿಗೆ ಸೇರಿ ಸರ್ವೇ ನಂಬರ್ 12/1 ರಲ್ಲಿ ಮನೆ ನಿರ್ಮಿಸಿಕೊಂಡು ಒಟ್ಟಿಗೆ ವಾಸ ಇದ್ದೆವು. ವಿಭಾಗ ಕೇಳಿದಾಗ ಅವರು ನಮ್ಮನ್ನು ಮನೆಯಿಂದ ಹೊರಗೆ ಹಾಕಿದ ನಂತರ ಕುರಿ ಶೆಡ್ ನಲ್ಲಿ ವಾಸ ಆಗಿರುತ್ತೇವೆ. ಮನೆಯನ್ನು ಕಳೆದ ಹತ್ತು ವರ್ಷಗಳ ಹಿಂದೆ ಕಟ್ಟಿರುತ್ತೇವೆ. ಮನೆಯನ್ನು ನಮ್ಮ ತಂದೆ ಮತ್ತು ಪ್ರತಿವಾದಿ ಇಬ್ಬರೂ ಸೇರಿ ನಿರ್ಮಿಸಿದ್ದು ಅದಕ್ಕೆ ಎಷ್ಟು ಖರ್ಚು ತಗುಲಿತ್ತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 12/1 ವಿಸ್ತೀರ್ಣ 1 ಎಕರೆ 33 ಗುಂಟೆ ಪ್ರದೇಶದಲ್ಲಿ ಮನೆ ನಿರ್ವಿಸಿದ್ದು ಸದರಿ ಜಮೀನಿನ ಯಾವ ಧಿಕ್ಕಿನಲ್ಲಿ ಮನೆ ನಿರ್ಮಿಸಿರುತ್ತೇವೆ ಎಂದು ಧಿಕ್ಕನ್ನು ಹೇಳಲು ಆಗುವುದಿಲ್ಲ. ಮನೆಯ ಬಾಗಿಲು ದಕ್ಷಿಣ ಧಿಕ್ಕಿಗೆ ಇದ್ದು ಎರಡು ಕೊಠಡಿಗಳು ಇವೆ.

ನಾನು ವಾದಿಯಾದ ನನ್ನ ತಂದೆಗೆ ಒಬ್ಬಳೇ ಮಗಳಾಗಿರುತ್ತೇನೆ. ನನ್ನ ಅಜ್ಜನಾದ ತಿಮ್ಮೇಗೌಡರಿಗೆ ಒಟ್ಟು 4 ಎಕರೆ ಜಮೀನು ಮೂರು ಕಡೆ ಇದೆ.

4. ಸರ್ವೇ ನಂಬರ್ 12/1 ರ ಯಾವ ಧಿಕ್ಕಿನಲ್ಲಿ ಸ್ವಾಧೀನ ಇದ್ದೀರಿ ಎಂದರೆ ಸಾಕ್ಷಿಯು ನಾವೆಲ್ಲಾ ಒಟ್ಟಿಗೆ ಸ್ವಾಧೀನ ಇದ್ದೇವೆ ಎಂದು ನುಡಿಯುತ್ತಾರೆ. ಈಗ ಸದರಿ ಜಮೀನಿನಲ್ಲಿ ರಾಗಿ ಬೆಳೆ ಬೆಳೆದಿರುತ್ತೇವೆ. ದಾವಾ ಐಟಂ ನಂಬರ್ 2 ಮತ್ತು 3 ರಲ್ಲಿಯು ಸಹ ರಾಗಿ ಬೆಳೆ ಬೆಳೆದಿರುತ್ತೇವೆ.

5. ನನ್ನ ತಂದೆಯಾದ ವಾದಿ ಮತ್ತು ಪ್ರತಿವಾದಿ 2006 ರಲ್ಲಿ ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದರೂ ಎಂದರೆ ಸರಿಯಲ್ಲ. ವಿಭಾಗದ ರೀತ್ಯಾ ವಾದಿಯಾದ ನನ್ನ ತಂದೆ ಮತ್ತು ಪ್ರತಿವಾದಿಗಳು ಪ್ರತ್ಯೇಕ ಸ್ವಾಧೀನಾನುಭವ ಹೊಂದಿ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನನ್ನ ತಂದೆಯಾದ ವಾದಿಯು 2011 ರಲ್ಲಿ ಪ್ರತಿವಾದಿಯ ಸೊಸೆಗೆ ಒಂದು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.